ಆಂದೋಲನ ಸೋಮವಾರ, 27 ಮಾರ್ಚ್ 2023

# ಎಟಿಎಂಇ ವಾರ್ಷಿಕೋತ್ಸವ ಸಂಭ್ರಮ





ಮೈಸೂರು: ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ವಾರ್ಷಿಕೋತ್ಸವ ಸಮಾರಂಭದಲ್ಲಿ ಅರಣ್ಯ ರಕ್ಷಕ ಮುಂಚೂಣಿ ಸಿಬ್ಬಂದಿಗಳಿಗೆ ಪರಿಕರಗಳ ವಿತರಣೆ, ಖ್ಯಾತ ಗಾಯಕ ರಘುದೀಕ್ಷಿತ್ ಮತ್ತು ತಂಡದ ಸಂಗೀತ ಸಂಜೆ ಮನಸೂರೆಗೊಂಡಿತು.

ಪ್ರತಿವರ್ಷವೂ ಸಾಮಾಜಿಕ ಕಳಕಳಿಯ ಉದ್ದೇಶದೊಂದಿಗೆ ವಾರ್ಷಿಕೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಬಾರಿಯೂ 'ಜೀವ ರಕ್ಷಕರ ಜೀವಗಳನ್ನು ರಕ್ಷಿಸೋಣ' ಎಂಬ ಸಂಕಲ್ಪದ ಘೋಷಣೆಯೊಂದಿಗೆ ಸಮಾರಂಭ ನಡೆಯಿತು. ಅರಣ್ಯ ಮತ್ತು ವನ್ಯಜೀವಿಗಳ ಮುಂಚೂಣಿ ರಕ್ಷಣಾ ಸಿಬ್ಬಂದಿಗೆ ರಕ್ಷಣಾ ಪರಿಕರಗಳಾದ ಅತ್ಯಾಧುನಿಕ ಟಾರ್ಚ್‌ಗಳು, ಮತ್ತಿತರ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಸಮಾರಂಭವನ್ನು ಮಿಸ್-ಕರ್ನಾಟಕ- ವಿಜೇತರಾದ ತನಿಷ್ಕಾ ಮೂರ್ತಿ, ನಾಗರಹೊಳೆ ವಲಯ ಅರಣ್ಯಾಧಿಕಾರಿ ಅಶೋಕ್ ಪರಮಾನಂದ್ ಉದ್ಘಾಟಿಸಿ ಎಟಿಎಂಇ ಶಿಕ್ಷಣ ಸಂಸ್ಥೆಯ ಉದ್ದೇಶ ಮತ್ತು ಸಾಮಾಜಿಕ ಕಾಳಜಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಎಟಿಎಂಇ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎಲ್.ಅರುಣ್ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಪ್ರಾಂಶುಪಾಲ ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದ ಮೂರ್ತಿ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ. ಎಲ್.ಯತೀಶ್, ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಕೀರ್ತನಾ, ಆಕಾಶ್ ನಿರಂಜನ ಹಾಜರಿದ್ದರು. ಇದಕ್ಕೂ ಮುನ್ನ ಎಟಿಎಂಇ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ನಡೆಸಿಕೊಟ್ಟ ಆಕರ್ಷಕ 'ಫ್ಯಾಷನ್ ವಾಕ್' ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಇದೇ ಸಂದರ್ಭದಲ್ಲಿ ಬಿಗ್‌ಬಾಸ್ ಖ್ಯಾತಿಯ ಕೆ.ಪಿ.ಅರವಿಂದ್ ಮತ್ತು ದಿವ್ಯಉರುಡುಗ ಅಭಿನಯದ ನೂತನ ಕನ್ನಡ ಚಲನಚಿತ್ರ 'ಅರ್ಧಂಬರ್ಧ ಪ್ರೇಮಕಥೆ' ಕನ್ನಡ ಚಲನಚಿತ್ರ ತಂಡ ಚಿತ್ರದ ಪ್ರಚಾರ ನಡೆಸಿತು.